# ಅಂಬಾನಿ ಸಿರಿಯ ಸುಪ್ಪತ್ತಿಗೆ



ಒಂದು ಕಾಲದಲ್ಲಿ ಭಾರತೀಯರು ಶ್ರೀಮಂತಿಕೆಯನ್ನು ಸೂಚಿಸಬೇಕೆಂದರೆ ಟಾಟಾ, ಬಿರ್ಲಾ ಎನ್ನುತ್ತಿದ್ದರು. ಈಗ ಅದು ಬದಲಾಗಿದೆ. ಇವತ್ತು ಭಾರತೀಯರಿಗೆ ಶ್ರೀಮಂತಿಕೆ ಎನ್ನುವ ಪದಕ್ಕೆ ಪರ್ಯಾಯ ಪದ ಎಂದಿದ್ದರೆ ಅದು ಅಂಬಾನಿ ಎನ್ನಬಹುದು. ರಿಲಯನ್ಸ್ ಇಂಡಸ್ಟ್ರೀಸ್‌ನ ಚೇರ್‌ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಮುಖೇಶ್ ಅಂಬಾನಿ ಭಾರತದ 'ನಂಬರ್ ಒನ್' ಶ್ರೀಮಂತ ಎಂದು ಹುರೂನ್ ಇಂಡಿಯಾ ರಿಚ್ ಲಿಸ್ಟ್ 2020 ಪ್ರಕಟಿಸಿದೆ. ಅದರಲ್ಲೂ ಸತತ 9ನೇ ವರ್ಷ ಅವರು ಈ ಪಟ್ಟವನ್ನು ಉಳಿಸಿಕೊಂಡಿದ್ದಾರೆ. ಈಗ ಅವರ ಶ್ರೀಮಂತಿಕೆ ಎಷ್ಟು ಹೆಚ್ಚಾಗಿದೆಯೆಂದರೆ, ಭಾರತದ ಶ್ರೀಮಂತರ ಪಟ್ಟಿಯಲ್ಲಿ 2ರಿಂದ 6ನೇ ಸ್ಥಾನದವರೆಗೆ ಇರುವ ಶ್ರೀಮಂತರ ಒಟ್ಟು ಆಸ್ತಿಯನ್ನು ಒಟ್ಟು ಸೇರಿಸಿದರೂ, ಮುಖೇಶ್ ಅವರ ಆಸ್ತಿ ಅದಕ್ಕಿಂತಲೂ ಹೆಚ್ಚಿದೆ!

ಕೊರೊನಾ ವೈರಸ್ ದಾಳಿಯ ಬಳಿಕ ಎಲ್ಲೆಡೆ ಆರ್ಥಿಕ ಕುಸಿತ ಎದ್ದು ಕಾಣುತ್ತಿದೆ. ಲಾಕ್‌ಡೌನ್‌ನಿಂದಾಗಿ ದೊಡ್ಡ ಉದ್ಯಮಿಗಳೂ ಸಂಕಷ್ಟದಲ್ಲಿದ್ದಾರೆ. ಆದರೆ ಮಾರ್ಚ್‌ನಲ್ಲಿ ಲಾಕ್‌ಡೌನ್ ಘೋಷಣೆಯಾದ ಬಳಿಕ ಮುಖೇಶ್ ಅಂಬಾನಿ ಅವರು ಮಾತ್ರ ಪ್ರತಿ ಗಂಟೆಗೆ 90 ಕೋಟಿ ರೂಪಾಯಿ ಗಳಿಸುತ್ತಿದ್ದಾರೆ ಎಂದು ಈ 'ರಿಚ್ ಲಿಸ್ಟ್' ಲೆಕ್ಕಾಚಾರ ಹೇಳುತ್ತಿದೆ! ಕಳೆದ ವರ್ಷ 2,77,700 ಕೋಟಿ ರೂಪಾಯಿ ಇದ್ದ ಮುಖೇಶ್ ಅವರ ಆಸ್ತಿಯ ಮೌಲ್ಯ ಈ ವರ್ಷ 6,58,400 ಕೋಟಿ ರೂಪಾಯಿಗೆ ಏರಿದೆ. ಹುರೂನ್ ಇಂಡಿಯಾ ಪ್ರಕಟಿಸಿರುವ ಜಾಗತಿಕ ರಿಚ್ ಲಿಸ್ಟ್ ಪಟ್ಟಿಯ 'ಟಾಪ್ 5' ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಏಕೈಕ ಭಾರತೀಯ ಸಿರಿವಂತ ಮುಖೇಶ್ ಅಂಬಾನಿ.

ತೈಲೋದ್ಯಮದಿಂದ ಹಿಡಿದು ಟೆಲಿಕಾಂವರೆಗೆ ನೂರೆಂಟು ವಹಿವಾಟುಗಳನ್ನು ನಡೆಸುತ್ತಿರುವ ಅಂಬಾನಿಯವರ ಒಟ್ಟು ಶ್ರೀಮಂತಿಕೆ ಒಂದೇ ವರ್ಷದಲ್ಲಿ ಶೇಕಡಾ 73ರಷ್ಟು ಹೆಚ್ಚಾಗಿರುವುದು ಹಲವರ ಕುತೂಹಲ ಮತ್ತು ಅನುಮಾನಗಳಿಗೂ ಕಾರಣವಾಗಿರುವುದು ಸುಳ್ಳಲ್ಲ. ಹೀಗೆ ಒಮ್ಮಿಂದೊಮ್ಮೆಲೆ ಆಸ್ತಿ ಮೌಲ್ಯ ಏರಿಕೆಯಾದ್ದರಿಂದ ಇವತ್ತು ಮುಖೇಶ್ ಅಂಬಾನಿ ಏಷ್ಯಾದ ಅತಿದೊಡ್ಡ ಶ್ರೀಮಂತರಾಗಿದ್ದು, ಜಗತ್ತಿನ ಶ್ರೀಮಂತರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ತೈಲೋದ್ಯಮದಲ್ಲಿ ಇದ್ದ ಗಮನವನ್ನು ಟೆಲಿಕಾಂ ಮತ್ತು ಚಿಲ್ಲರೆ ಮಾರಾಟ ಕ್ಷೇತ್ರಗಳತ್ತಲೂ ಹರಿಸಿದ ಬಳಿಕ ಮುಖೇಶ್ ಅವರ ಆಸ್ತಿ ಗಳಿಕೆ ಹೆಚ್ಚಾಗಿದೆ ಎನ್ನುವುದು ಉದ್ಯಮ ಕ್ಷೇತ್ರದ ಲೆಕ್ಕಾಚಾರ. ಇದರ ಜೊತೆಗೆ ಔಷಧಿ ಕ್ಷೇತ್ರದಲ್ಲೂ ಬಂಡವಾಳ ಹೂಡಿದ್ದು, ಅದರಿಂದಲೇ ಒಟ್ಟು ಗಳಿಕೆಯ ಶೇ 21ರಷ್ಟು ಆದಾಯ ಬರುತ್ತಿದೆಯಂತೆ. ಕೋವಿಡ್ 19 ವೈರಸ್ ಹರಡಿದ ಬಳಿಕ ವೈಯಕ್ತಿಕ ಆರೋಗ್ಯ ಕ್ಷೇತ್ರದಲ್ಲಿ ಬೇಡಿಕೆ ಒಂದೇ ಸಮನೆ ಏರಿದ್ದು ಮುಖೇಶ್ ಉದ್ಯಮಗಳಿಗೆ ವರದಾನವಾಗಿ ಪರಿಣಮಿಸಿದೆ.

ಟೆಲಿಕಾಂ ಕ್ಷೇತ್ರವಂತೂ ಭಾರತದಲ್ಲಿ ಮುಖೇಶ್‌ಗೆ ಚಿನ್ನದ ಮೊಟ್ಟೆಯಿಡುವ ಕೋಳಿಯಂತಿದೆ. ಅದಕ್ಕೆ ಕಾರಣ ಆಳುವ ಪಕ್ಷದ ಕೃಪಾಶೀರ್ವಾದ. ಮುಂದಿನ ಎರಡು ವರ್ಷಗಳಲ್ಲಿ 20 ಕೋಟಿ ಸ್ಮಾರ್ಟ್‌ಫೋನ್‌ಗಳನ್ನು ಉತ್ಪಾದಿಸಲು ರಿಲಯನ್ಸ್ ಇಂಡಸ್ಟ್ರೀಸ್ ನಿರ್ಧರಿಸಿದೆ. ಅಗ್ಗದ ಬೆಲೆಗೆ ಅತ್ಯುತ್ತಮ ಫೋನ್ ಒದಗಿಸುವ ಯೋಜನೆಯಲ್ಲಿ ಕೇವಲ 4000 ರೂಪಾಯಿಗೆ ಹೊಸ ಆಂಡ್ರಾಯ್ಡ್ ಫೋನ್ ಒದಗಿಸುವ ಮೂಲಕ ಜಿಯೊ ಟೆಲಿಕಾಂ ಲಾಭ ಗಳಿಕೆಯನ್ನು ಎತ್ತರಿಸಲು ಹೊರಟಿದೆ. ರಿಲಯನ್ಸ್ ಇಂಡಸ್ಟ್ರೀಸ್‌ನ ಈಗಿನ ವಹಿವಾಟು ವಿಸ್ತರಣೆಯನ್ನು ಗಮನಿಸಿದರೆ ಮುಂದಿನ ವರ್ಷವೂ ಮುಖೇಶ್, ಏಷ್ಯಾದ ನಂಬರ್ ಒನ್ ಶ್ರೀಮಂತರಾಗಿಯೇ ಉಳಿಯುವ ಸಾಧ್ಯತೆ ಇದೆ.

ಇಷ್ಟೆಲ್ಲ ಶ್ರೀಮಂತಿಕೆಯನ್ನು ಮುಖೇಶ್ ಅವರ ಕಂಪೆನಿಗಳು ರಾಜಮಾರ್ಗದಲ್ಲೇ ಗಳಿಸಿವೆಯೆ ಎನ್ನುವ ಪ್ರಶ್ನೆಯೊಂದು ಆಗಾಗ್ಗೆ ಉದ್ಯಮ ವಲಯದಲ್ಲಿ ಕೇಳಿಸುತ್ತಲೇ ಇದೆ. ದೇಶವನ್ನು ಆಳುವ ಸರ್ಕಾರಗಳ ಜೊತೆಗೆ ಹೇಗೆ ಸಖ್ಯ ಬೆಳೆಸಿಕೊಳ್ಳಬೇಕು ಎನ್ನುವುದನ್ನು ಅಂಬಾನಿಗಳು ಚೆನ್ನಾಗಿ ಅರಿತುಕೊಂಡಿದ್ದಾರೆ ಎನ್ನುವುದು ಒಂದು ವಾದ. ಹಿಂದೆ ಧೀರೂಭಾಯಿ ಅಂಬಾನಿ ಅವರು ಇದ್ದಾಗ ಆಗಿನ ಕಾಂಗ್ರೆಸ್ ಸರಕಾರದ ಜೊತೆಗೆ ಉತ್ತಮ ಸಖ್ಯ ಹೊಂದಿದ್ದಂತೆಯೇ, ಈಗ ಇರುವ ಬಿಜೆಪಿ ಸರಕಾರದ ಜೊತೆಗೆ ಮುಖೇಶ್ ಅಂಬಾನಿ ಅತ್ಯಂತ ನಿಕಟ ಸಖ್ಯ ಹೊಂದಿದ್ದಾರೆ ಎನ್ನುವವರಿದ್ದಾರೆ. ಹೀಗೆ ಸಖ್ಯ ಹೊಂದಿದ್ದಾಗ ಸರಕಾರಗಳು ಜಾರಿಗೆ ತರುವ ಔದ್ಯಮಿಕ, ಆರ್ಥಿಕ ನೀತಿಯನ್ನು ಪ್ರಭಾವಿಸಲು ಮತ್ತು ಮುಂದೆ ಬರುವ ನೀತಿಗಳ ಕುರಿತು ಮೊದಲೇ ಮಾಹಿತಿ ಪಡೆದುಕೊಂಡು ಉದ್ಯಮದ ಲಾಭ ಗಳಿಕೆ ಹೆಚ್ಚಿಸಲು ಸಾಧ್ಯವಾಗುತ್ತದೆ. ಮುಖೇಶ್ ಯಶಸ್ಸಿನ ಗುಟ್ಟು ಇದೇ ಎನ್ನಲಾಗುತ್ತಿದೆ.

ಉದ್ಯಮ ಗುಂಪೊಂದು ಹೀಗೆ ಯಶಸ್ಸು ಸಾಧಿಸುವಾಗ ಸುದ್ದಿ ಮಾಧ್ಯಮಗಳ ಮೇಲೆ ಹಿಡಿತ ಸಾಧಿಸುವುದೂ ಒಂದು ತಂತ್ರವೇ. ರಿಲಯನ್ಸ್ ಇಂಡಸ್ಟ್ರೀಸ್ 'ನೆಟ್‌ವರ್ಕ್ 18 ಮೀಡಿಯಾ ಅಂಡ್ ಇನ್‌ವೆಸ್ಟ್‌ಮೆಂಟ್ಸ್' ಎಂಬ ದೊಡ್ಡ ಮಾಧ್ಯಮಬಲವನ್ನು ಹೊಂದಿರುವುದು ಈ ಹಿನ್ನೆಲೆಯಲ್ಲಿ ಗಮನಿಸಬೇಕಾದ ಸಂಗತಿ. ಟಿವಿ 18, ಡೆನ್ ನೆಟ್‌ವರ್ಕ್ಸ್, ಹಾಥ್‌ವೇ ಕೇಬಲ್, ಡಾಟಾಕಾಮ್, ಐಬಿಎನ್ ಲೈವ್ ಡಾಟ್‌ಕಾಮ್, ಸಿಎನ್‌ಎನ್, ಐಬಿಎನ್7, ಫಸ್ಟ್‌ಪೋಸ್ಟ್, ನಿಕಲೋಡೆನ್, ಮನಿಕಂಟ್ರೋಲ್ ಡಾಟ್ ಕಾಮ್, ಬುಕ್‌ಮೈ ಶೋ ಡಾಟ್‌ಕಾಮ್, ಎಂಟಿವಿ, ಸಿಎನ್‌ಬಿಸಿ ಹೀಗೆ ಮುಖೇಶ್ ಅಂಬಾನಿ ಸಾಮ್ಯ ಹೊಂದಿರುವ ಸುದ್ದಿ ಜಾಲದ ಪಟ್ಟಿ ದೊಡ್ಡದಿದೆ. 15 ಭಾಷೆಗಳಲ್ಲಿ 20 ಟಿವಿ ಚಾನೆಲ್‌ಗಳನ್ನು ಹೊಂದಿರುವ ರಿಲಯನ್ಸ್ ಗ್ರೂಪ್, 70 ಕೋಟಿ ವೀಕ್ಷಕರನ್ನು ಹೊಂದಿದೆ ಎನ್ನಲಾಗುತ್ತಿದೆ. ಬಹುತೇಕ ಭಾರತೀಯರು ದಿನನಿತ್ಯ ನೋಡಬೇಕಾದ/ಚರ್ಚಿಸಬೇಕಾದ ಸುದ್ದಿಗಳು ಯಾವುವು ಎನ್ನುವುದನ್ನು ರಿಲಯನ್ಸ್ ಗುಂಪು ನಿಯಂತ್ರಿಸುತ್ತಿದೆ ಎನ್ನುವ ಮಾತಿನಲ್ಲಿ ಅತಿಶಯೋಕ್ತಿಯೇನೂ ಇಲ್ಲ.

63ರ ಹರೆಯದ ಈ ಗುಜರಾತಿ ದಿಗ್ಗಜ, 1970ರವರೆಗೂ ಅಪ್ಪನೊಂದಿಗೆ ಮುಂಬೈಯಲ್ಲಿ ಎರಡು ಬೆಡ್‌ರೂಂ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಿದ್ದರು. ಕುಟುಂಬದ ಹಣಕಾಸು ಸ್ಥಿತಿ ಉತ್ತಮವಾದ ಬಳಿಕ ಕೊಲಾಬಾದಲ್ಲಿ 14 ಮಹಡಿಗಳ 'ಸೀವಿಂಡ್' ಎನ್ನುವ ಅಪಾರ್ಟ್‌ಮೆಂಟ್ ಬ್ಲಾಕ್‌ನಲ್ಲಿ ವಾಸ ಮುಂದುವರಿಯಿತು. ಈಗ ಮುಖೇಶ್ ವಾಸಿಸುತ್ತಿರುವ 27 ಮಹಡಿಗಳ, ಮೂರು ಹೆಲಿಪ್ಯಾಡ್ ಮತ್ತು 160 ಕಾರ್ ಗ್ಯಾರೇಜ್‌ಗಳುಳ್ಳ, ಒಂದು ಶತಕೋಟಿ ಅಮೆರಿಕನ್ ಡಾಲರ್ ಬೆಲೆ ಬಾಳುವ 'ಆಂಟಿಲಿಯಾ' ಎಂಬ ಅರಮನೆ, ಜನಸಾಮಾನ್ಯರ ಪಾಲಿಗೆ ಮುಂಬೈಯ ಅದ್ಭುತಗಳಲ್ಲಿ ಒಂದಾಗಿದೆ. ಶ್ರೀಮಂತಿಕೆಯನ್ನು ಸಾಧಿಸುವ ನಿಟ್ಟಿನಲ್ಲಿ ಉದ್ಯಮಪತಿಗಳು ಕ್ರಮಿಸುವ ಒಳದಾರಿಗಳ ಬಗ್ಗೆ ಈಗಿನ ಪೀಳಿಗೆಯವರಿಗೆ ಅಂತಹ ಆಕ್ಷೇಪಗಳೇನೂ ಇದ್ದಂತಿಲ್ಲ. ಹಾಗಾಗಿ ಮುಖೇಶ್ ಅಂಬಾನಿಯ ಅಗಾಧ ಶ್ರೀಮಂತಿಕೆಯು ಬಹುತೇಕ ಭಾರತೀಯರಿಗೆ ಇವತ್ತು ಹೆಮ್ಮೆಯ ಸಂಗತಿ ಎಂದೇ ಕಾಣಿಸುವುದು ಈ ಕಾಲಘಟ್ಟದ ವಿಪರ್ಯಾಸವೂ ಹೌದು.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65